ಡಾ. ಅಂಬೇಡ್ಕರ್ ಹೋಗುತ್ತಿರುವುದನ್ನೇ ಕಸ್ತೂರ್‌ಬಾ ನೋಡುತ್ತಿದ್ದರು. ಅದಕ್ಕೆ ಕಾರಣವಿತ್ತು. ಅಷ್ಟು ದೂರ ಬಿಟ್ಟು ಬರಲು ಗಾಂಧಿಯೂ ಜೊತೆಗೆ ಹೊರಟಿದ್ದರು. ಕಸ್ತೂರ್‌ಬಾ ನೋಡಿಯೇ ನೋಡಿದರು.

ಡಾ. ಅಂಬೇಡ್ಕರ್ ಮತ್ತು ಗಾಂಧಿಯವರ ಬೆನ್ನು ಮಾತ್ರ ಕಾಣುತ್ತಿತ್ತು!

ಮಹದೇವ ದೇಸಾಯಿಗೆ ಕಸ್ತೂರ್‌ಬಾ ಹೇಳಿದರು:

‘ನಂಗನ್ನುಸ್ತೆ. ಡಾಕ್ಟ್ರು ಸಾಹೇಬ್ರು ಹೇಳೋದ್ರಲ್ಲಿ ಸತ್ಯ ಇದೆ. ನಿಮಗೇನನ್ನುಸ್ತೆ?’

‘ನಿಜಾಮ್ಮ, ನಮ್ಮ ಬಾಪೂಜೀನೂ ಅಸ್ಪೃಶ್ಯತೇನ ಕಟುವಾಗಿ ವಿರೋಧಿಸ್ತಾರಲ್ಲ. ಇಷ್ಟರಲ್ಲೇ ಅಸ್ಪೃಶ್ಯತಾ ವಿರೋಧಿ ಸಮಾವೇಶ ನಡೆಸ್ಬೇಕು ಅಂತಾನೂ ಇದಾರೆ.’

‘ಆ ಸಮಾವೇಶದಲ್ಲಿ ನಾನೂ ಭಾಗವಹಿಸ್ತೇನೆ. ಮಹಿಳೆಯರನ್ನು ಸಂಘಟಿಸ್ತೇನೆ.’

ಎಂದು ಕಸ್ತೂರ್‌ಬಾ ನುಡಿದಾಗ ಅವರ ಮುಖದಲ್ಲಿ ಬೆಳಕಿತ್ತು!

ಮಹದೇವ ದೇಸಾಯಿ ಹೇಳಿದಂತೆ, ಗಾಂಧಿ ‘ಅಸ್ಪೃಶ್ಯತಾ ವಿರೋಧಿ ಸಮಾವೇಶ’ ನಡೆಸಿದರು. ತಾವು ನುಡಿದಂತೆ ಕಸ್ತೂರ್‌ಬಾ ಭಾಗವಹಿಸಿದರು. ಜನರನ್ನು ಉದ್ದೇಶಿಸಿ ಹುರುಪು ತುಂಬಿದಂತೆ ಮಾತಾಡಿದರು. ಅಸ್ಪೃಶ್ಯತೆಯನ್ನು ಖಂಡಿಸಿದರು. ಸ್ವತಃ ತಾವು ತಮ್ಮ ಸಾಂಪ್ರದಾಯಿಕ ಸೃಷ್ಟಿಕೋನ ಬಿಟ್ಟು ಬದಲಾದದ್ದನ್ನು ವಿವರಿಸಿದರು. ‘ಅಸ್ಪೃಶ್ಯತೆ ನಿವಾರಣೆ, ಸಮಾಜದ ಬದಲಾವಣೆ ನಮ್ಮ ಧ್ಯೇಯವಾಗಬೇಕು’ ಎಂದು ಕರೆಕೊಟ್ಟರು.

* * *

ಕತ್ತಲಲ್ಲೂ ಬೆಳಕುಂಡ ಅನುಭವ. ನೆನಪುಗಳನ್ನು ಅನುಭವಿಸಿದ ಕಸ್ತೂರ್‌ಬಾ ಮತ್ತು ಗಾಂಧಿ ಇಬ್ಬರಲ್ಲೂ ಧನ್ಯತೆಯ ಭಾವ. ಗಾಂಧಿ ಕಸ್ತೂರ್‌ಬಾ ಕಡೆ ನೋಡಿದರು. ಕಸ್ತೂರ್‌ಬಾ ಅಂದಿನ ಹೋರಾಟದ ಬೆಳಕಿನ ಭಾವದಿಂದ ಬೇರೆ ಭಾವಕ್ಕೆ ಸ್ಥಿತಂತರಗೊಂಡಂತೆ ಕಾಣಿಸಿತು. ಮುಖದಲ್ಲಿ ಸಂಕಟದ ಸುಳಿಯೊಂದು ತಿರುಗುತ್ತಿದ್ದಂತೆ ಭಾಸವಾಯಿತು.

‘ಕಸ್ತೂರ್’ – ಗಾಂಧಿ ಕರೆದರು.

ಕಸ್ತೂರ್‌ಬಾ ಅದೇ ತಾನೆ ನೆನಪಿನಿಂದ ಬಿಡಿಸಿಕೊಂಡಂತೆ ನೋಡಿದರು.

‘ಅಂತೂ ನೀನು ದೊಡ್ಡ ಹೋರಾಟಗಾರ್ತಿ ಆಗ್‌ಬಿಟ್ಟೆ. ಅದೇ ನನಗ ಸಂತೋಷ’ ಎಂದರು ಗಾಂಧಿ.

ಕಸ್ತೂರ್‌ಬಾರಲ್ಲಿ ನಸುನಗುವಿನ ಜೊತೆಗೇ ಸಂಕಟ ಬೆರೆತಂತಿತ್ತು.

‘ನಾನು ನಿನ್ನನ್ನ ಮುಂಗೋಪಿ ಅಂತ ಕರೆದಿದ್ದೆ, ‘ಪೆಟ್ಟಿ’ ಅಂದಿದ್ದೆ ಅಂತ ಹೇಳ್ತಾ ಇದ್ದೆಯಲ್ಲ ನೀನು. ನನ್ನ ಸಾರ್ವಜನಿಕ ಜೀವನ ವಿಸ್ತಾರವಾದಂತೆ ನೀನೂ ದೊಡ್ಡದಾಗಿ ಬೆಳೀತಾ ನನ್ನ ಕೆಲಸಗಳಲ್ಲೇ ಮುಳುಗಿದೆ. ದೊಡ್ಡಕೆಲ್ಸ ಮಾಡ್ದೆ ಅಂತಾನೂ ಹೇಳಿದ್ದೀನಿ, ಬರ್ದಿದ್ದೀನಿ. ನೀನು ಹೋರಾಟಕ್ಕಿಳಿದ್ ಮೇಲೆ ನಿನ್ನ ವ್ಯಕ್ತಿತ್ವಾನೂ ಬದಲಾಯ್ತು. ನಿನ್ ಬಗ್ಗೆ ನನ್ನ ದೃಷ್ಟಿಕೋನಾನು ಬದಲಾಯ್ತು.’

## ಇಲ್ಲಿಯವರೆಗೆ



ಸಬರಮತಿ ಆಶ್ರಮ ಗಾಂಧಿ ತತ್ವಗಳ ಪ್ರಯೋಗಶಾಲೆಯಷ್ಟೇ ಆಗಿರಲಿಲ್ಲ; ಕಸ್ತೂರ್‌ಬಾ ಅವರ ಪಾಲಿಗೆ ಅಗ್ನಿಪರೀಕ್ಷೆಯೂ ಆಗಿತ್ತು. ಹಲವು ವರ್ಗದ, ಭಿನ್ನ ಮನೋಭಾವಗಳ ಜನರನ್ನು ಸಂಭಾಳಿಸುವುದು, ಅವರ ಯೋಗಕ್ಷೇಮ ನೋಡಿಕೊಳ್ಳುವುದು ಕಸ್ತೂರ್ ಅವರಿಗೆ ಸುಲಭವಾಗಿರಲಿಲ್ಲ. ಆಶ್ರಮವಾಸಿಯೊಬ್ಬರಿಗೆ ಜ್ವರ ಬಂದರೆ, ಅದರ ಬಿಸಿ ಕಸ್ತೂರ್ ಅವರಿಗೆ ತಗುಲುತ್ತಿತ್ತು. ಕಸ್ತೂರ್ ಸಿಹಿ ತಿನಿಸು ಬಯಸಿದರೆ ಗಾಂಧೀಜಿಗೆ ಪಥ್ಯವಾಗುತ್ತಿರಲಿಲ್ಲ. ಆದರೆ, ಅನುರಾಗವನ್ನೇ ಬದುಕಿನ ಸಿಹಿಯಾಗಿಸಿಕೊಳ್ಳುವ ಕಲೆ ಇಬ್ಬರಿಗೂ ದಕ್ಕಿತ್ತು. ರಾಮಾಯಣದ ರಾಮ ಹಾಗೂ ಸೀತೆಯ ದಾಂಪತ್ಯದ ಮಾದರಿ ಕಸ್ತೂರ್‌ಬಾ–ಗಾಂಧಿ ಅವರ ದಾಂಪತ್ಯದಲ್ಲೂ ಇತ್ತು. ಆದರೆ, ಕಸ್ತೂರ್ ಅವರ ಪಾಲಿಗೆ ಅಗ್ನಿಪರೀಕ್ಷೆ ಎನ್ನುವುದು ಒಂದು ಬಾರಿಯಷ್ಟೇ ಹಾಯಬೇಕಾದ ಅಗ್ನಿಕುಂಡವಾಗಿರಲಿಲ್ಲ.

‘ಆದ್ರೆ ಮನೆ ಒಳಗಡೆ ನೀವೇನೂ ಬದಲಾಗ್ಲಿಲ್ಲ.’

ಕಸ್ತೂರ್‌ಬಾ ಥಟ್ಟನೆ ಅಂದರು. ಗಾಂಧಿ ಈ ಮಾತನ್ನು ನಿರೀಕ್ಷಿಸಿರಲಿಲ್ಲ.

‘ಏನ್ ಮಾತು ಕಸ್ತೂರ್ ನಿಂದು? ನಾನೇನ್ ತೊಂದ್ರೆ ಮಾಡ್ದೆ? ನನ್ನ ಆದರ್ಶಕ್ಕೆ ತಕ್ಕನಾಗಿ ನಾನು ನಡ್ಕೊಂಡೆ.’

‘ನಿಮ್ಮ ಆದರ್ಶ ಜಗತ್ತಿಗೇ ಗೊತ್ತು. ಅದಕ್ಕೇ ಜನರು ನಿಮ್ಮನ್ನ ‘ರಾಷ್ಟ್ರಪಿತ’ ಅಂತಾನೂ ಕರೆದರು. ಆದ್ರೆ ನೀವು ಮಕ್ಕಳಿಗೆ ‘ಪುತ್ರ ಪಿತ’ನಾಗಿ ನಡ್ಕೊಳ್ಳಲಿಲ್ಲ.’

ಕಸ್ತೂರ್‌ಬಾ ಕಟುವಾಗಿಯೇ ನುಡಿದಾಗ ಗಾಂಧಿಮನ ಕ್ಷಣಕಾಲ ಅಲುಗಾಡಿತು. ಮಾತು ಹೊರಡಲಿಲ್ಲ. ಕಸ್ತೂರ್‌ಬಾ ಅವರೇ ಮಾತು ಮುಂದುವರಿಸಿದರು: ‘ಹೌದು ನೀವು ರಾಷ್ಟ್ರಪಿತ; ಪುತ್ರಪಿತ ಅಲ್ಲ. ಅಂದ್ರೆ ನೀವು ಮಕ್ಕಳಿಗೂ ಮಹಾತ್ಮರಾಗೇ ನಡ್ಕೊಂಡ್ರಿ. ಅಪ್ಪ ಆಗಿ ನಡ್ಕೋಬೇಕಿತ್ತು.’

ಈಗ ಗಾಂಧಿಯವರಿಗೆ ಸುಮ್ಮನಿರಲಾಗಲಿಲ್ಲ.

‘ಅಂದ್ರೆ ಹೊರಗೊಂದು ಒಳಗೊಂದು ಇರ್‌ಬೇಕಿತ್ತ?’ ಎಂದು ಪ್ರಶ್ನಿಸಿದರು.

‘ಹೊರಗೊಂದು ಒಳಗೊಂದು ಇರಬಾರದು ಅಂತಾನೇ ನಾನು ಹೇಳೋದು.’

ಕಸ್ತೂರ್‌ಬಾ ಮಾತಿಗೆ ಗಾಂಧಿ ಕುತೂಹಲಿಯಾದರು. ಹಾಗಾದರೆ ತಮ್ಮಿಬ್ಬರ ವಿಚಾರದಲ್ಲಿ ಏನು ಅಂತರ? ಯೋಚಿಸಿದರು. ಕಸ್ತೂರ್‌ಬಾ ಅವರೇ ಮಾತು ಮುಂದುವರಿಸಿದರು:

‘ಹೊರಗಡೆ ನಾಯಕರಾಗಿ ಆದರ್ಶರಾದ ಹಾಗೆ ಅಪ್ಪನಾಗಿಯೂ ಒಂದು ಆದರ್ಶ ಇರಬೇಕಿತ್ತು. ಆದರ್ಶ ಅಂದ್ಮೇಲೆ ಹೊರಗಡೇಗೆ ತಕ್ಕನಾಗಿ ಹೊರಗಡೆ, ಒಳಗಡೇಗೆ ತಕ್ಕನಾಗಿ ಒಳಗಡೆ, ಇರಬೇಕಲ್ವ? ಹೊರಗಡೆ ಇದ್ದೋರೂ ಮನುಷ್ಯರೇ, ಒಳಗಡೆ ಇದ್ದೋರೂ ಮನುಷ್ಯರೇ.’

‘ಅದು ನನಗೂ ಗೊತ್ತು. ಮಕ್ಕಳು ಕೂಡ ಆದರ್ಶಕ್ಕೆ ತಕ್ಕನಾಗಿ ಇರ್‌ಬೇಕಲ್ವ?’

ಗಾಂಧಿ ಕೇಳಿದರು.

‘ಹರಿ ಒಬ್ಬನ್ನ ಬಿಟ್ಟು ಯಾರು ನಿಮ್ಮ ಮಾತಿಗೆ ಎದುರಾಡಿದ್ರು ಹೇಳಿ. ಹರಿ ಸರ್‍ಯಾಗ್ ನಡೆದುಕೊಳ್ಳಲಿಲ್ಲ ನಿಜ. ಹಾಗಂತ ನಾವು ತಾಯಿ ತಂದೆಯರಾಗಿ ನಮಗೆ ಜವಾಬ್ದಾರಿ ಏನೂ ಇರೋದಿಲ್ವಾ?’

ಕಸ್ತೂರ್‌ಬಾ ಕೂಡ ಕೇಳಿದರು.

‘ಎಲ್ಲಾ ಮುಗಿದ ಮೇಲೂ ಜಗಳ ಆಡಬೇಕ?’

ಗಾಂಧಿ ಬೇಸರದಿಂದ ಪ್ರಶ್ನಿಸಿದರು.

‘ಇದು ಜಗಳ ಅಲ್ಲ. ನನ್ನ ನೆನಪಿನಲ್ಲಿ ಹೋರಾಟದ ಹೆಜ್ಜೆಗುರುತು ಮಾತ್ರ ಇಲ್ಲ. ತಾಯೀಗೆ ಆದ ಗಾಯ ಕೂಡ ಇದೆ.’

ಕಸ್ತೂರ್‌ಬಾ ಈ ಮಾತಾಡುವಾಗ ಕಣ್ಣಲ್ಲಿ ಬಂದ ಹನಿ, ಗಾಂಧಿಯನ್ನು ನೋಡುತ್ತಿತ್ತು. ಆ ಹನಿಯನ್ನು ಎದುರಿಸಲಾಗದೆ ಗಾಂಧಿ ಬೇರೆಡೆಗೆ ಮುಖ ಮಾಡಿದರು.

ಕಸ್ತೂರ್‌ಬಾ ತಾಯಿ ನೆನಪಿನ ನಾವೆ ಹತ್ತಿದರು.

* * *

ಹರಿಲಾಲ್ ಜೊತೆಯಲ್ಲಿರಲಿಲ್ಲ. ಹೆಚ್ಚು ಸಂಪರ್ಕದಲ್ಲೂ ಇರಲಿಲ್ಲ. ಹಾಗೆಂದು ಗಾಂಧಿ ಗಮನಕ್ಕೆ ಏನನ್ನೂ ತರದೆ ಇರುತ್ತಿರಲಿಲ್ಲ. ಅಗತ್ಯಬಿದ್ದಾಗ ಅಥವಾ ಬೇಕೆನಿಸಿದಾಗ ಆಶ್ರಮಕ್ಕೆ ಬರುತ್ತಿದ್ದ. ಏನಾದರೂ ಬೇಡಿಕೆ ಇಡುತ್ತಿದ್ದ ಅಥವಾ ತಾನು ಹೀಗ್ ಮಾಡ್ತೇನೆ ಎಂದು ಮಾಹಿತಿ ನೀಡುತ್ತಿದ್ದ. ಕೆಲವೊಮ್ಮೆ ಸಹಾಯಕ್ಕಾಗಿ ಬರುತ್ತಿದ್ದ. ಹಾಗೆಯೇ ಒಮ್ಮೆ ಬಂದ. ಬಾಪುವನ್ನು ಹಣ ಕೇಳಿದ.

‘ಯಾಕ್ ಬೇಕು ಅಷ್ಟೊಂದ್ ಹಣ?’ ಗಾಂಧಿ ಕೇಳಿದರು.

‘ಒಂದು ಅಂಗಡಿ ಹಾಕಬೇಕು ಅಂತಿದ್ದೀನಿ. ಜೀವನಕ್ಕೆ ಏನಾದ್ರೂ ಬೇಕಲ್ಲಾ?’

ಹರಿಲಾಲ್ ನೇರವಾಗಿ ಹೇಳಿದ.

‘ನನ್ನ ಹತ್ರ ಹಣ ಎಲ್ಲಿದೆ?’

‘ಹಾಗಾದ್ರೆ ಸಾಲ ಮಾಡ್ತೀನಿ.’

‘ಸಾಲಾನು ಮಾಡಬೇಡ.’

‘ಯಾಕ್ ಮಾಡಬಾರ್ದು?’

‘ಸಾಲ ಮಾಡಿ ತೀರುಸ್ತೀಯ ಅಂತ ಖಾತರಿ ಇಲ್ಲ. ಅಂಗಡಿ ಸರಿಯಾಗಿ ನಡುಸ್ತೀಯ ಅನ್ನೋ